ದಿಃ 24.07.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 504/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲತಾ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ದೇವರಾಜ | ಚಾಸಾಃ 4 |
| ವಯಸ್ಸು | : | 25 ವರ್ಷ | |
| ಕೆಲಸ | : | ಗೃಹಿಣಿ | ಸಾ ಪ್ರ ಬೋ |
| ವಾಸ | : | ಗುಂಡಿಮಡು ಬೋವಿಹಟ್ಟಿ ಗ್ರಾಮ | ದಿಃ24.07.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ.1 ನನ್ನ ತಾಯಿ. ಚಾಸಾ. 5 ನನ್ನ ತಂಗಿ. ಚಾಸಾ. 6 ನನ್ನ ಪತಿ. ನ್ಯಾಯಾಲಯದ ಮುಂದಿರುವ 1 ಮತ್ತು 4ನೇ ಆರೋಪಿತರು ಗೊತ್ತು. ಇತರೆ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

2. ಮೂರು ವರ್ಷಗಳ ಹಿಂದೆ ಗುಂಡಿಮಡು ಬೋವಿಹಟ್ಟಿಯಲ್ಲಿ ಗಲಾಟೆ ಆಗಿತ್ತು. ನನ್ನ ತಂಗಿಯಾದ ಚಂದನ ರವರಿಗೆ ನಿಶ್ಚಿತಾರ್ಥ ಆಗಿತ್ತು, ಆಕೆಯನ್ನು 1ನೇ ಆರೋಪಿ ಕರೆದುಕೊಂಡು ಹೋಗಿ ಮದುವೆಯಾಗಿದ್ದನು. ಈ ವಿಚಾರದ ಕುರಿತು ಹೋಗಿ ಕೇಳಲಾಗಿ ಆರೋಪಿತರು ನಮ್ಮ ಮನೆ ಬಳಿ ಗಲಾಟೆ ಮಾಡಿರುತ್ತಾರೆ. ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ನಮ್ಮ ಮನೆಯ ಬಳಿ ಬಂದು ಚಾಸಾ. 1 ರವರಿಗೆ ಹೊಡೆದಿರುತ್ತಾರೆ. ಬಿಡಿಸಲು ಹೋದ ನನಗೆ ಮತ್ತು ಚಾಸಾ. 5 ರವರಿಗೂ ಸಹ ಹೊಡೆದಿರುತ್ತಾರೆ. ಎಲ್ಲಾ ಆರೋಪಿತರು ನನಗೆ, ಚಾಸಾ. 1 ಮತ್ತು 5 ರವರಿಗೆ ಕೈ ಮತ್ತು ಕಾಲಿನಿಂದ ಹೊಡೆದಿರುತ್ತಾರೆ. 2ನೇ ಆರೋಪಿ ಕಲ್ಲಿನಿಂದ ಚಾಸಾ. 1 ರವರಿಗೆ ಹೊಡೆದಿರುತ್ತಾರೆ. ಆಗ ಚಾಸಾ. 6 ರವರು ಬಂದು ಗಲಾಟೆ ಬಿಡಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ರ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ದಿ: 24.07.2026

**ಪಾಟೀ ಸವಾಲು ಎ.ಪಿ.ಪಿ.ಯವರಿಂದ:**

3. ಗಲಾಟೆ ದಿ.21.01.2023 ರಂದು ಬೆಳಗ್ಗೆ 9 ಗಂಟೆಗೆ ನಡೆದಿರುತ್ತದೆ ಎಂದರೆ ಸರಿ. ಎಲ್ಲಾ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನನಗೆ, ಚಾಸಾ. 1 ಮತ್ತು 5 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಎಲ್ಲಾ ಆರೋಪಿತರು ನನಗೆ, ಚಾಸಾ. 1 ಮತ್ತು 5 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನನಗೆ ಹೆಚ್ಚು ಗಾಯ ಆಗದ ಕಾರಣ ಮನೆಯಲ್ಲಿಯೇ ಉಪಚರಿಸಿಕೊಂಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ವಿ.ಕೆ. ವಕೀಲರಿಂದ:**

4. ಆರೋಪಿತರು ನಮಗೆ ಮೊದಲಿನಿಂದಲೂ ಸಂಬಂಧಿಕರಲ್ಲ. 1 ನೇ ಆರೋಪಿ ನನ್ನ ತಂಗಿಯನ್ನು ಮದುವೆಯಾದಾಗಿನಿಂದ ನಮ್ಮ ಮತ್ತು ಅವರ ನಡುವೆ ವೈಮನಸ್ಸು ಇದೆ. ನನ್ನ ತಂಗಿಯಾದ ಚಂದನ ರವರಿಗೆ ನಿಶ್ಚಿತಾರ್ಥ ಆಗಿದ್ದು, 1 ನೇ ಆರೋಪಿ ಆತನನ್ನು ಕರೆದುಕೊಂಡು ಹೋಗಿ ವಿವಾಹವಾದ ಕಾರಣ ಗಲಾಟೆ ಆಗಿತ್ತು. ನಿಶ್ಚಿತಾರ್ಥ ಆಗಿದ್ದ ಬಗ್ಗೆ ಪೊಲೀಸರಿಗೆ ಛಾಯಾಚಿತ್ರ ತೋರಿಸಿದ್ದೆವು. ತನಿಖಾಧಿಕಾರಿಗಳು ಛಾಯಾಚಿತ್ರಗಳನ್ನು ತೆಗೆದುಕೊಂಡು ಹೋಗಿಲ್ಲ. ಗಲಾಟೆಯ 3-4 ದಿನಗಳ ಮೊದಲು 1 ನೇ ಆರೋಪಿ ನನ್ನ ತಂಗಿಯನ್ನು ಮದುವೆಯಾಗಿದ್ದನು. ನನ್ನ ತಂಗಿ ನಮ್ಮ ಮನೆಯಲ್ಲಿಯೇ ಗುಂಡಿಮಡು ಬೋವಿಹಟ್ಟಿಯಲ್ಲಿಯೇ ಇದ್ದರು. ನನ್ನ ತಂಗಿ ನಮ್ಮ ಮನೆಯಲ್ಲಿ ಒಂದು ವರ್ಷ ಇದ್ದರು. ನನ್ನ ತಂಗಿ ನಮ್ಮ ಮನೆಯಲ್ಲಿ ಇರಲಿಲ್ಲ, ಬದಲಾಗಿ ಆಗಾಗಾ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂಗಿ ಆರೋಪಿತರ ಕುಟುಂಬದವರೊಂದಿಗೆ ಸಂಪರ್ಕ ಇದ್ದುದ್ದನ್ನು ನಾನು ನೋಡಿರಲಿಲ್ಲ. ಗಲಾಟೆ ನಡೆದ ದಿನಾಂಕ ನಿಖರವಾಗಿ ಗೊತ್ತಿಲ್ಲ. ನಾವು ಆರೋಪಿತರ ಬಳಿ ನಿಶ್ಚಿತಾರ್ಥ ಆಗಿದ್ದ ನನ್ನ ತಂಗಿಯನ್ನು ಕರೆದುಕೊಂಡು ಹೋಗಿ ಮದುವೆ ಮಾಡಿಕೊಂಡಿದ್ದರ ಬಗ್ಗೆ ಕೇಳಿದ್ದಕ್ಕೆ ಆರೋಪಿತರು ಬಂದು ನಮ್ಮ ಮೇಲೆ ಗಲಾಟೆ ಮಾಡಿದರು. ನಾವು ಬೇರೆಯವರ ಬಳಿ 1 ನೇ ಆರೋಪಿ ನನ್ನ ತಂಗಿಯನ್ನು ಕರೆದುಕೊಂಡು ಹೋಗಿ ಮದುವೆ ಆಗಿದ್ದರ ಬಗ್ಗೆ ಮಾತನಾಡುತ್ತಿದ್ದೆವು, ಅದನ್ನು ಕೇಳಿಸಿಕೊಂಡ ಆರೋಪಿತರು ಬಂದು ನಮ್ಮ ಮೇಲೆ ಗಲಾಟೆ ಮಾಡಿದರು. ಆರೋಪಿತರು ನಮ್ಮ ಮನೆಯ ಬಳಿ ಬೆಳಗ್ಗೆ 9 ಗಂಟೆಗೆ ಬಂದು ಗಲಾಟೆ ಮಾಡಿದರು. ಆಗ ನಮ್ಮ ಮನೆಯಲ್ಲಿ ನಾನು, ಚಾಸಾ. 1 ಮತ್ತು 5 ರವರು ಇದ್ದೆವು. ನನ್ನ ಪತಿ ಹೊರಗಡೆ ಹೋಗಿದ್ದರು. ಅಲ್ಲಿಯೇ ಊರಿನಲ್ಲಿನ ಅಂಗಡಿಯ ಬಳಿ ಹೋಗಿದ್ದರು. ಗಲಾಟೆ ನಡೆಯುತ್ತಿದ್ದಾಗ ನನ್ನ ಪತಿ ಮನೆಗೆ ಬಂದರು. ಗಲಾಟೆಯ ಸಮಯದಲ್ಲಿ ಆರೋಪಿತರು ಮತ್ತು ನಾವು ಪರಸ್ಪರ ಬೈದಾಡಿದ್ದೇವೆ ಎಂದರೆ ಸಾಕ್ಷಿ ನಾವು ಮೂರು ಜನ ಮಾತ್ರ ಇದ್ದೆವು, ಅವರು ಹೆಚ್ಚು ಜನ ಇದ್ದರು ಎಂದು ಹೇಳುತ್ತಾರೆ. ಆರೋಪಿತರು ಕೈ ಮತ್ತು ಕಾಲಿನಿಂದ ಹಾಗೂ ಕಲ್ಲಿನಿಂದ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ದಿ: 24.07.2026

5. ಅಲ್ಲಿಯೇ ನಮ್ಮ ಮನೆಯ ಬಳಿ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಹೊಡೆದರು. ಕಲ್ಲಿನಿಂದ ಮೊದಲು ಚಾಸಾ.1 ರವರಿಗೆ ಹೊಡೆದರು. ಕಲ್ಲಿನಿಂದ ಹೊಡೆದಾಗ ಚಾಸಾ.1 ರವರಿಗೆ ಗಾಯ ಆಗಿತ್ತು. ನಂತರ ಕೈ ಮತ್ತು ಕಾಲಿನಿಂದ ನಮಗೆ ಹೊಡೆದರು. ಆರೋಪಿತರು ಕಲ್ಲಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ._